# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

## ಉತ್ತರ ಕನ್ನಡ : ಕಾರವಾರ

**ಸೇಶಲ್ ಕೇಸ್ ನಂ. 22/2021**

**ದೋ.ಸಾ. : 1 ಫ್ರಾ.ಸಾ. : 2**

ಸಾಕ್ಷಿಯ ಹೆಸರು : ಜಬೀನಾಬಿ ಶೇಖ್
ಗಂಡನ ಹೆಸರು : ಅಬುತಾಲೀಬ ಶೇಖ್
ವಯಸ್ಸು : 37 ವರ್ಷ
ಕೆಲಸ : ಅಡಿಗೆ ಸಹಾಯಕಿ, ಸುಲ್ತಾನಕೇರಿ ಉರ್ದು ಶಾಲೆ, ಚಂದಾವರ,
ವಾಸ : ಚಂದಾವರ, ಹೊನ್ನಾವರ ತಾಲೂಕು.

**ದಿನಾಂಕಃ 05-04-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ಮೃತ ಅಬುತಾಲೀಬ ನನ್ನ ಗಂಡ. ನಮ್ಮ ಮನೆ ಚಂದಾವರದ ಜನತಾ ಕಾಲೋನಿಯಲ್ಲಿ ಇರುತ್ತದೆ. ನನಗೆ ಒಟ್ಟೂ ಮೂರು ಜನ ಮಕ್ಕಳು. ಚಾಸಾ-19 ನನ್ನ ಮೊದಲನೆಯ ಮಗ, 2 ನೇಯವಳು ಅಫ್ರಾ, 3 ನೇಯವನು ಅಯ್ಯಾಜ. ನನ್ನ ಗಂಡ ಲಗೇಜ್ ಆಟೋ ಓಡಿಸುತ್ತಿದ್ದನು. ಚಾಸಾ-17 ನನ್ನ ಗಂಡನ ಅಣ್ಣನ ಮಗ. ಚಾಸಾ-18 ಆರೋಪಿಯ ಮೊದಲನೆ ಹೆಂಡತಿಯ ಅಕ್ಕನ ಗಂಡ ಹಾಗೂ ನನಗೆ ದೂರದ ಸಂಬಂಧಿ. ಆರೋಪಿ ನನಗೆ ಗೊತ್ತು, ಆತ ನಮ್ಮ ಮನೆಯ ಹಿಂದಿನ ಓಣಿಯವನು. ಆರೋಪಿ ಯಾವಾಗಲೂ ಹೊರ ದೇಶಗಳಲ್ಲಿ ಇರುತ್ತಿದ್ದನು ಹಾಗೂ ವರ್ಷದಲ್ಲಿ 1-2 ಸಲ ಊರಿಗೆ ಬಂದು ಹೋಗುತ್ತಿದ್ದನು. ನನ್ನ ಗಂಡನ ಕೊಲೆ ಆಗುವ 3 ತಿಂಗಳ ಮೊದಲು ಆರೋಪಿ ಊರಿಗೆ ಬಂದು ಇಲ್ಲಿಯೇ ಇದ್ದನು. ಆರೋಪಿ ಓಣಿಯ ಹೆಂಗಸರಿಗೆ ಹಿಂದಿನಿಂದ ಬಂದು ತಬ್ಬಿಕೊಳ್ಳುವುದು, ಅಶ್ಲೀಲವಾಗಿ ಮಾತನಾಡುವುದು ಹಾಗೂ ತನ್ನ ಲುಂಗಿಯನ್ನು ಎತ್ತಿ ತನ್ನ ಗುಪ್ತಾಂಗವನ್ನು ತೋರಿಸುವುದು, ಕೈ ಸನ್ನೆ ಮಾಡಿ ಕರೆಯುವುದು, ಅಸಭ್ಯವಾಗಿ ವರ್ತಿಸುವುದು ಮಾಡುತ್ತಿದ್ದ. ಆದ್ದರಿಂದ ಓಣಿಯ ಹೆಂಗಸರೆಲ್ಲ ನನ್ನ ಗಂಡನ ಬಳಿ ಬಂದು ಆರೋಪಿಗೆ ಬುದ್ಧಿ ಮಾತು ಹೇಳುವಂತೆ ಹೇಳುತ್ತಿದ್ದರು. ಆ ನಂತರ ನನ್ನ ಗಂಡ ಆರೋಪಿಗೆ 2-3 ಸಲ ಈ ರೀತಿ ಎಲ್ಲಾ ನಡೆದುಕೊಳ್ಳಬೇಡಾ ಎಂದು ಬುದ್ಧಿವಾದ ಹೇಳಿ ಬಂದಿದ್ದರು.

2. ಈ ಪ್ರಕರಣದ ಘಟನೆ ನಡೆಯುವ ಮೊದಲು ನಾನು ಆರೋಪಿಯ ಮನೆಯ ಪಕ್ಕದಲ್ಲಿದ್ದ ಚಾಸಾ–14 ರವರ ಮನೆಗೆ ಕುಡಿಯುವ ನೀರು ತರಲು ಹೋದಾಗ ಆರೋಪಿಯು ತನ್ನ ಕಾಂಪೌಂಡನಲ್ಲಿ ನಿಂತು ನನಗೆ ಸನ್ನೆ ಮಾಡುವುದು, ಶಬ್ದ ಮಾಡಿ ಕರೆಯುವುದು, ಅಶ್ಲೀಲವಾಗಿ ಮಾತನಾಡುವುದು ಹಾಗೂ ಲುಂಗಿಯನ್ನು ಎತ್ತಿ ತನ್ನ ಗುಪ್ತಾಂಗವನ್ನು ತೋರಿಸುವುದು, ಕೈ ಸನ್ನೆ ಮಾಡಿ ಕರೆಯುವುದು, ಅಸಭ್ಯವಾಗಿ ವರ್ತಿಸುವುದು ಮಾಡುತ್ತಿದ್ದ. ಇದನ್ನು ನಾನು ನನ್ನ ಗಂಡನಿಗೆ ಹೇಳಿದೆ. ಆದ್ದರಿಂದ ನನ್ನ ಗಂಡ ಮತ್ತೊಮ್ಮೆ ಆರೋಪಿಗೆ ಬುದ್ಧಿವಾದ ಹೇಳಿದ್ದರು. ಈ ಪ್ರಕರಣ ನಡೆಯುವ 13 ದಿನಗಳ ಮೊದಲು ಚಾಸಾ–14 ರವರು ತನ್ನ ಮನೆಯ ಹಿಂದೆ ರಸ್ತೆ ಕೆಲಸ ಮಾಡುತ್ತಿದ್ದವರ ಜೊತೆ ಮಾತನಾಡುತ್ತಿದ್ದಾಗ, ಅವರ ಪಕ್ಕದ ಮನೆಯ ಆರೋಪಿಯು ಚಾಸಾ–14 ರವರಿಗೂ ಸಹಾ ಕೈ ಸನ್ನೆ ಮಾಡಿ, ಅಶ್ಲೀಲ ನುಡಿಗಳನ್ನು ಆಡಿ, ಲುಂಗಿಯನ್ನು ಎತ್ತಿ ತನ್ನ ಗುಪ್ತಾಂಗವನ್ನು ತೋರಿಸಿ, ಅಸಭ್ಯವಾಗಿ ವರ್ತಿಸಿದ್ದ. ರಸ್ತೆ ಕೆಲಸದವರು ಹೋದ ನಂತರ ಚಾಸಾ–14 ರವರು ಆರೋಪಿಗೆ ಪ್ರಶ್ನಿಸಿದ್ದಕ್ಕೆ, ಆರೋಪಿಯು ಚಾಸಾ–14 ರವರ ಕಾಂಪೌಂಡ ಒಳಗೆ ಬಂದು, ಅವರ ಕೈ ಹಿಡಿದು ಎಳೆದಾಡಿ, ಕೆಟ್ಟ ಕೆಟ್ಟ ಶಬ್ದಗಳಿಂದ ಬೈದು, ಬೆದರಿಕೆ ಸಹಾ ಹಾಕಿದ್ದ. ಈ ಬಗ್ಗೆ ಚಾಸಾ–14 ರವರು ಹೊನ್ನಾವರ ಪೊಲೀಸ್ ಠಾಣೆಗೆ ಹೋಗಿ ಆರೋಪಿ ವಿರುದ್ಧ ದೂರನ್ನು ಸಹಾ ನೀಡಿದ್ದರು. ಸದರಿ ದೂರಿಗೆ ನನ್ನ ಗಂಡ ಸಾಕ್ಷಿದಾರರಾಗಿದ್ದರು.

3. ದಿನಾಂಕಃ 03.05.2021 ರಂದು ಚಾಸಾ–15 ರವರು ತಮ್ಮ ಮನೆಯಲ್ಲಿ ನೀರು ಇಲ್ಲದ ಕಾರಣ ತನ್ನ ಚಿಕ್ಕಮ್ಮನಾದ ಚಾಸಾ–14 ರವರ ಮನೆಗೆ ಬಟ್ಟೆ ತೊಳೆಯಲು ಬಂದಿದ್ದು, ಬೆಳಿಗ್ಗೆ 11.00 ಗಂಟೆಗೆ ಚಾಸಾ–14 ರವರ ಮನೆಯ ಕಾಂಪೌಂಡ ಒಳಗೆ ಬಟ್ಟೆ ತೊಳೆಯುತ್ತಿದ್ದಾಗ ಪಕ್ಕದ ಮನೆಯಲ್ಲಿದ್ದ ಆರೋಪಿಯು ಆಕೆಗೆ ಕೆಟ್ಟ ಕೆಟ್ಟ ಶಬ್ದಗಳಿಂದ ಬೈಯುವುದು, ಅಶ್ಲೀಲವಾಗಿ ಮತನಾಡುವುದು, ಕೈ ಸನ್ನೆ ಮಾಡಿ, ಲುಂಗಿಯನ್ನು ಎತ್ತಿ ತನ್ನ ಗುಪ್ತಾಂಗವನ್ನು ತೋರಿಸಿರುತ್ತಾನೆ. ಈ ವಿಷಯವನ್ನು ಚಾಸಾ–15 ರವರು ತನ್ನ ಗಂಡನಾದ ಚಾಸಾ–10 ರವರಿಗೆ ಹೇಳಿರುತ್ತಾರೆ. ನಂತರ ಚಾಸಾ–10 ರವರು ಆ ದಿನ ಮಧ್ಯಾಹ್ನ 12.45 ಗಂಟೆಗೆ ನನ್ನ ಗಂಡನ ಬಳಿ ಬಂದು ಹೇಳಿರುತ್ತಾರೆ. ನಂತರ ನಾನು, ನನ್ನ ಗಂಡ, ಮಕ್ಕಳು ಹಾಗೂ ಚಾಸಾ–10 ರವರು ಆರೋಪಿಯನ್ನು ಕೇಳಲು ಅವರ ಮನೆ ಹತ್ತಿರ ಹೋದಾಗ, ಆರೋಪಿಯು ಚಾಸಾ–14 ರವರ ಮನೆಯ ಮುಂದಿನ ಮಸೀದಿಗೆ ಹೋಗುವ ರಸ್ತೆಯಲ್ಲಿ ಸಿಕ್ಕಿದ್ದು, ಆತನಿಗೆ ನನ್ನ ಗಂಡ ಯಾಕೆ ಈ ರೀತಿ ಹೆಂಗಸರಿಗೆಲ್ಲಾ ತೊಂದರೆ ಕೊಡುತ್ತಿಯಾ ಹಾಗೂ ಚಾಸಾ–15 ರವರಿಗೂ ಸಹಾ ಯಾಕೆ ತೊಂದರೆ ಕೊಡುತ್ತಿಯಾ ಎಂದು ಕೇಳಿದಾಗ, ಆರೋಪಿ ನನ್ನ ಗಂಡನಿಗೆ ನೀನು ಯಾರು ಕೇಳುವುದಕ್ಕೆ,

ರಾಂಡ್ ಕೇ ಬೇಟೆ, ಬೇರೆಯವರ ಹೆಂಗಸರ ವಿಷಯ ನಿನಗೆ ಯಾಕೆ ಎಂದು ಬೈದಿರುತ್ತಾನೆ. ಆಗ ಅಲ್ಲಿದ್ದ ಚಾಸಾ–11 ಮತ್ತು 12 ರವರೂ ಸಹಾ ಆರೋಪಿಗೆ ಬುದ್ಧಿವಾದ ಹೇಳಿರುತ್ತಾರೆ. ಆಗ ನನ್ನ ಗಂಡ ಆರೋಪಿಗೆ ನೀನು ಇದೇ ರೀತಿ ಮಾಡಿದರೆ ಪೊಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿ ಜೈಲಿಗೆ ಹಾಕಿಸುತ್ತೇನೆ ಎಂದು ಹೇಳಿದ್ದು, ಆ ಸಮಯದಲ್ಲಿ ಆರೋಪಿ ತನ್ನ ಮನೆಯ ಒಳಗಡೆ ಹೋಗಿ ಚಾಕು ಒಂದನ್ನು ತನ್ನ ಕೈಯಲ್ಲಿ ಹಿಡಿದುಕೊಂಡು ಬಂದು, ನಿನಗೆ ಚಾಕು ಹಾಕಿ ಕೊಲೆ ಮಾಡುತ್ತೇನೆಂದು ಹೆದರಿಸಿದ, ಆಗ ನನ್ನ ಗಂಡ ಅಲ್ಲೇ ಬಿದ್ದಿದ್ದ ಅಡಿಕೆ ಮರದ ಪಟ್ಟೆಯಿಂದ ಆತನು ಚಾಕು ಹಿಡಿದುಕೊಂಡಿದ್ದ ಕೈಗೆ ಹೊಡೆದರು. ಆಗ ಆರೋಪಿಯು ನನ್ನ ಗಂಡನಿಗೆ ನಿನ್ನನ್ನು ಸಾಯಿಸುತ್ತೇನೆ ಎಂದು ಹೇಳಿ ತನ್ನ ಕೈಯಲ್ಲಿ ತಂದಿದ್ದ ಚಾಕುವಿನಿಂದ ನನ್ನ ಗಂಡನ ಎದೆಗೆ ಚುಚ್ಚಿದನು, ಆಗ ನನ್ನ ಗಂಡ ಅಲ್ಲಿಯೇ ಕೆಳಗೆ ಬಿದ್ದರು ಹಾಗೂ ಆರೋಪಿ ಚಾಕುವನ್ನು ಹಿಡಿದುಕೊಂಡು ಅಲ್ಲಿಂದ ಹೊರಟು ಹೋದ. ಈ ಘಟನೆ ನಡೆದಾಗ ಮದ್ಯಾಹ್ನ 1.15 ಗಂಟೆ ಆಗಿರುತ್ತದೆ. ಆರೋಪಿಯು ನನ್ನ ಗಂಡನ ಎದೆಗೆ ಚಾಕುವಿನಿಂದ ಚುಚ್ಚಿದ್ದರಿಂದ ನನ್ನ ಗಂಡನ ಎದೆಯಿಂದ ತೀವ್ರ ರಕ್ತಸ್ರಾವ ಆಗಿರುತ್ತದೆ. ಆಗ ಸ್ಥಳಕ್ಕೆ ಚಾಸಾ–13 ರವರು ಸಹಾ ಬಂದಿದ್ದು, ನಾವೆಲ್ಲರೂ ಸೇರಿ ನನ್ನ ಗಂಡನಿಗೆ ಉಪಚರಿಸಿ, ಚಾಸಾ–16 ರವರ ಆಟೋದಲ್ಲಿ ನನ್ನ ಗಂಡನನ್ನು ಕುಮಟಾ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ನಾವು ಅಲ್ಲಿಗೆ ಹೋದಾಗ ಮದ್ಯಾಹ್ನ 1.50 ಗಂಟೆ ಆಗಿರುತ್ತದೆ. ನನ್ನ ಗಂಡನನ್ನು ಪರೀಕ್ಷಿಸಿದ್ದ ವೈದ್ಯರು ಮೃತನಾಗಿರುತ್ತಾನೆ ಎಂದು ತಿಳಿಸಿರುತ್ತಾರೆ. ಆ ಸಮಯಕ್ಕೆ ಪೊಲೀಸರು ಆಸ್ಪತ್ರೆಗೆ ಬಂದಿದ್ದು, ನಾನು ಚಾಸಾ–18 ರವರ ಮೂಲಕ ದೂರನ್ನು ಬರೆಸಿ ಅದಕ್ಕೆ ನಾನು ರುಜು ಮಾಡಿ ಪೊಲೀಸರಿಗೆ ನೀಡಿರುತ್ತೇನೆ. ಸಾಕ್ಷಿಯು ತಾನು ನೀಡಿದ ದೂರನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ–10 ಎಂದು, ಸಾಕ್ಷಿಯ ರುಜುವನ್ನು ನಿಪಿ–10(ಎ) ಎಂದು ಗುರುತಿಸಲಾಯಿತು. ದೂರನ್ನು ನಾನು ಬರೆಯುವ ಪರಿಸ್ಥಿತಿಯಲ್ಲಿ ಇಲ್ಲದ ಕಾರಣ, ನಾನು ಚಾಸಾ–18 ರವರ ಮೂಲಕ ದೂರನ್ನು ಬರೆಸಿರುತ್ತೇನೆ.

4. ಘಟನೆ ನಡೆಯುವ ಕಾಲಕ್ಕೆ ಚಾಸಾ–10 ರವರು ತನ್ನ ಮೊಬೈಲಿನಿಂದ ಘಟನೆಯನ್ನು ಚಿತ್ರೀಕರಣ ಮಾಡಿರುತ್ತಾರೆ. ಮರುದಿನ ಚಾಸಾ–10 ರವರು ಸದರಿ ಚಿತ್ರೀಕರಣವನ್ನು ನನಗೆ ತೋರಿಸಿದ್ದು, ನಾನು ಅದನ್ನು ನೋಡಿರುತ್ತೇನೆ. ಅದೇ ದಿನ ನಾನು ಪೊಲೀಸರ ಮುಂದೆ ಮರು ಹೇಳಿಕೆಯನ್ನು ನೀಡಿರುತ್ತೇನೆ. ಆ ನಂತರ ದಿನಾಂಕಃ 01.07.2021 ರಂದು ಪೊಲೀಸರು ನನ್ನನ್ನು ಹೊನ್ನಾವರ ನ್ಯಾಯಾಲಯಕ್ಕೆ ಕರೆದುಕೊಂಡು ಹೋಗಿದ್ದು, ಅಲ್ಲಿ ಘಟನೆಯ ಪೂರ್ಣ ಮಾಹಿತಿಯನ್ನು ನಾನು ಹೇಳಿರುತ್ತೇನೆ. ಘಟನೆ ನಡೆದಾಗ ನನ್ನ ಗಂಡ ಪಿಂಕ್ ಚೆಕ್ಸ ಷರ್ಟ್ ಹಾಗೂ ಪಿಂಕ್ ಕಲರ್ ಲುಂಗಿಯನ್ನು ಧರಿಸಿದ್ದರು, ಕನ್ನಡಕ ಧರಿಸಿದ್ದರು, ಹವಾಯ್ ಚಪ್ಪಲಿಯನ್ನು ಸಹಾ

ಧರಿಸಿದ್ದರು ಹಾಗೂ ಆರೋಪಿಯು ನೀಲಿ ಬಣ್ಣದ ಷರ್ಟ್, ಬಿಳಿ ಮತ್ತು ಕಪ್ಪು ಬಣ್ಣದ ಚೆಕ್ಸ ಲುಂಗಿಯನ್ನು ಧರಿಸಿದ್ದನು.

(ಈ ಹಂತದಲ್ಲಿ ವಿಶೇಷ ಸರಕಾರಿ ಅಭಿಯೋಜಕರು ಮುಂದುವರೆದ ಮುಖ್ಯ ವಿಚಾರಣೆಗೆ ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ